ಓ ಎಸ್ ನಂ.**338/2016**
ಪಿಡಬ್ಲ್ಯೂ.**2**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **19.07.2024**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು ಃ ಶ್ರೀ ಎ ಎನ್ ಜಿ ವಕೀಲರಿಂದಃ–

ನನ್ನ ಚಿಕ್ಕಪ್ಪನ ಮಕ್ಕಳು ನ್ಯಾಯಾಲಯಕ್ಕೆ ಸಾಕ್ಷಿ ಹೇಳುವಂತೆ ಕರೆದಿದ್ದ ಕಾರಣ ನಾನು ಬಂದಿರುತ್ತೇನೆ. ನನಗೆ ಈ ದಾವೆಯ ಸಂಪೂರ್ಣ ಮಾಹಿತಿ ಗೊತ್ತಿರುತ್ತದೆ. ಈ ದಾವೆಯನ್ನು ಸತೀಶ್ ಪಾಟೀಲ್ ಮತ್ತು ಸಂದೀಪ್ ಪಾಟೀಲ್ ಸೇರಿ ವಿಶ್ವನಾಥ ಮತ್ತು ಸಾವಿತ್ರಮ್ಮ ಮೇಲೆ ಹಾಕಿರುತ್ತಾರೆ. ವಾದಿಯರ ತಂದೆ ಮಕ್ಕಳಿಗೆ ತಿಳಿಯದಂತೆ ಮಾರಾಟ ಮಾಡಿದ್ದಾರೆ ಹಾಗೂ ಅವರಿಗೆ ದಾವಾ ಆಸ್ತಿಯಲ್ಲಿ ಅವರಿಗೆ ಭಾಗ ಬೇಕು ಎಂದು ಪರಿಹಾರ ಕೇಳಿರುತ್ತಾರೆ. ಈ ದಾವೆಯಲ್ಲಿ ಒಟ್ಟು **2** ಸ್ವತ್ತುಗಳು ಇವೆ. ದಾವಾ ಆಸ್ತಿಯ ಖಾತಾ ನಂಬರು ಮತ್ತು ವಿಸ್ತೀರ್ಣ ಗೊತ್ತು. ದಾವಾ ಆಸ್ತಿಯು **2** ನೇ ಪ್ರತಿವಾದಿಯು ನನ್ನ ಚಿಕ್ಕಪ್ಪನವರಾದ ವೆಂಕಟೇನರಸೇಗೌಡ ರವರಿಂದ ಖರೀದಿಸಿದ್ದರು ನಂತರ ಅವರಿಂದ **3** ನೇ ಪ್ರತಿವಾದಿಗೆ ಹೋಗಿರುತ್ತದೆ. **1991–92** ರಲ್ಲಿ ಸದರಿ ಆಸ್ತಿಯನ್ನು ನನ್ನ ಚಿಕ್ಕಪ್ಪ ಮಾರಾಟ ಮಾಡಿರಬಹುದು. ವಾದಿಯರ ತಂದೆಯು ದಾವಾ ಆಸ್ತಿಗಳನ್ನು ದಿನಾಂಕಃ **27.03.1991** ರಂದು ಕಾನೂನುಬದ್ದವಾಗಿ **2** ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಮಕ್ಕಳಿಗೆ ತಿಳಿಯದಂತೆ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. **1991** ರಲ್ಲಿ ನನ್ನ ಚಿಕ್ಕಪ್ಪನಿಗೆ ಮೂರು ಜನ ಮಕ್ಕಳು ಇದ್ದರು. **2016** ರಲ್ಲಿ ಮೊದಲನೇ ಮಗ ಸಂದೀಪನಿಗೆ **35 –36** ವರ್ಷವಾಗಿರಬಹುದು. ಸದರಿ ವಯಸ್ಸಿನ ತಾಳೆ ಮಾಡಿದಾಗ **1991** ರಲ್ಲಿ ಅವರು ಮೈನರ್ ಆಗಿದ್ದರು ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನ **2** ನೇ ಮಗನ ಹೆಸರು ಸತೀಶ್. ಅವರಿಗೆ **1991** ರಲ್ಲಿ **18** ವರ್ಷವಾಗಿತ್ತು. ಆ ಸಮಯದಲ್ಲಿ ಸತೀಶ್ ಕೂಡ ಮೈನರ್ ಆಗಿದ್ದರು ಎಂದರೆ ಸರಿಯಲ್ಲ. **3** ನೇ ಮಗ ರಮೇಶ್ ಪಾಟೀಲ್ ಆಗ ಮೈನರ್ ಆಗಿದ್ದರು. ನಾನು ದಿನಾಂಕಃ **27.03.1991** ರ ಕ್ರಯ ಪತ್ರವನ್ನು ನೋಡಿಲ್ಲ. **2** ನೇ ಪ್ರತಿವಾದಿಯು **3** ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು

ಯಾವಾಗ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಪತ್ರವನ್ನು ನಾನು ನೋಡಿಲ್ಲ. **1991** ರ ಈಚೆಗೆ ದಾವಾ ಆಸ್ತಿಗೆ ಸಂಬಂಧಿಸಿದ ಕಂದಾಯ ದಾಖಲಾತಿಗಳು ಹಾಗೂ ಕಂದಾಯ ಪಾವತಿ ರಶೀತಿಗಳನ್ನು ನಾನು ನೋಡಿಲ್ಲ. **1991** ರಿಂದ ಇತ್ತೀಚೆಗಿನ ರೆವಿನ್ಯೂ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿದ್ದೇನೆ ಮೊದಲು **2** ನೇ ಪ್ರತಿವಾದಿಯ ಹೆಸರಿನಲ್ಲಿದ್ದು ಈಗ **3** ನೇ ಪ್ರತಿವಾದಿಯ ಹೆಸರಿನಲ್ಲಿವೆ. **1991** ರಲ್ಲಿ ದಾವಾ ಆಸ್ತಿ ಮಾರಾಟವಾದ ನಂತರ ಪಂಚಾಯಿತಿಯಲ್ಲಿ ಖಾತೆಯು **2** ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿದೆ ಎಂದರೆ ಸರಿ. **1991** ರಿಂದ **1994** ರ ತನಕ **2** ನೇ ಪ್ರತಿವಾದಿಯೇ ಕಂದಾಯ ಕಟ್ಟುತ್ತಿದ್ದರು ಎಂದರೆ ಸರಿ. ನನ್ನ ಚಿಕ್ಕಪ್ಪನವರು **1991** ರಂದು ದರದು ನಿಮಿತ್ತವಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. **2** ನೇ ಪ್ರತಿವಾದಿಯು ತಮ್ಮ ಕುಟುಂಬಕ್ಕೆ ಹಣಕಾಸಿನ ಅವಶ್ಯಕತೆ ಇದ್ದ ಕಾರಣ ದಿನಾಂಕಃ **17.11.1994** ರಲ್ಲಿ ದಾವಾ ಆಸ್ತಿಯನ್ನು **3** ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರ ಆಧಾರದ ಮೇಲೆ **3** ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿದೆ ಎಂದರೆ ಗೊತ್ತಿಲ್ಲ. **1994** ರಿಂದ ಇಲ್ಲಿಯ ತನಕ **3** ನೇ ಪ್ರತಿವಾದಿಯೇ ದಾವಾ ಆಸ್ತಿಯ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಗೊತ್ತಿಲ್ಲ. **1994** ರಿಂದ ಇಲ್ಲಿಯ ತನಕ **3** ನೇ ಪ್ರತಿವಾದಿಯೇ ಸ್ವಾದೀನದಲ್ಲಿದ್ದಾರೆ ಎಂದರೆ ಗೊತ್ತಿಲ್ಲ. ವಾದಿಯರು ಮತ್ತು **1** ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಿಸ್ಸೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. **1991** ರಲ್ಲಿ ವಾದಿಯರ ತಂದೆ ದಾವಾ ಅಸ್ತಿಯನ್ನು ಮಾರಾಟ ಮಾಡುವ ಸಮಯದಲ್ಲಿ ಅವರ ಮಕ್ಕಳೆಲ್ಲಾ ಮೈನರ್ ಆಗಿದ್ದ ಕಾರಣ ಅವರಿಗೆ ಕ್ರಯ ಪತ್ರವನ್ನು ಪ್ರಶ್ನಿಸುವ ಹಕ್ಕು ಇಲ್ಲ ಹಾಗೂ ದಾವಾ ಆಸ್ತಿಯಲ್ಲಿ ಯಾವುದೇ ಹಿಸ್ಸೆ ಬರಬೇಕಾಗಿಲ್ಲ ಎಂದರೆ ಸರಿಯಲ್ಲ. ವಾದಿಯರು ಪುಣೆಯಲ್ಲಿ **1994** ರಿಂದ ವಾಸ ಮಾಡುತ್ತಿದ್ದಾರೆ. ಸಾಕ್ಷಿಯು ಮುಂದುವರೆದ ಬಂದು ಹೋಗುತ್ತಿರುತ್ತಾರೆ ಎಂದು ಹೇಳುತ್ತಾರೆ. **3** ನೇ ಪ್ರತಿವಾದಿಯು ಲಿಂಗಾಯಿತ ಜಾತಿಗೆ ಸೇರಿದವನು. ನಾನು ಒಕ್ಕಲಿಗ ಜಾತಿಗೆ ಸೇರಿದವನು. ದಾವಾ ಆಸ್ತಿಯಲ್ಲಿ ವಾದಿಯರಿಗೆ ಯಾವುದೇ ಹಿಸ್ಸೆ ಹಕ್ಕು ಇಲ್ಲದೇ ಇದ್ದರೂ ಕೂಡ ನಾನೇ ಅವರ ಮೂಲಕ ಈ ದಾವೆಯನ್ನು ಹಾಕಿಸಿದ್ದೇನೆ ಎಂದರೆ ಸರಿ

ಯಲ್ಲ. **1991** ರಲ್ಲಿ ನನ್ನ ಚಿಕ್ಕಪ್ಪ ದಾವಾ ಆಸ್ತಿಯ ಮೇಲೆ ಹಕ್ಕು ಕಳೆದುಕೊಂಡಿದ್ದು ಈಗ **3** ನೇ ಪ್ರತಿವಾದಿಯು ಅದರ ಸಂಪೂರ್ಣ ಮಾಲೀಕರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶಿಲ್ಪಾ.ಹೆಚ್.ಎ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.